# ಜೂನ್ ತಿಂಗಳಲ್ಲಿ ನಡೆದ ಮಹತ್ವದ ಘಟನಾವಳಿಗಳು



**೧. ಶ್ರೀಮತ್ ಸ್ವಾಮಿ ಆತ್ಮಸ್ಥಾನಂದಜಿ ಮಹಾರಾಜ್ ಅವರ ಮಹಾಸಮಾಧಿ:** ರಾಮಕೃಷ್ಣ ಮಹಾಸಂಘದ ೧೫ನೇ ಪರಮಾಧ್ಯಕ್ಷರಾದ ಪೂಜ್ಯ ಸ್ವಾಮೀಜಿಯವರು **ಜೂನ್ ೧೮ರಂದು** ಮಹಾಸಮಾಧಿಯನ್ನು ಹೊಂದಿದರು. ಅವರ ಕಳೇಬರವನ್ನು ಸೇವಾ ಪ್ರತಿಷ್ಠಾನ ಆಸ್ಪತ್ರೆಯಿಂದ ಬೇಲೂರು ಮಠಕ್ಕೆ ತಂದು, ಅಲ್ಲಿನ ಸಾಸಂಸ್ಕೃತಿಕ ಭವನದಲ್ಲಿ ಇಡಲಾಯಿತು. ದಿನಾಂಕ ೧೯ ರಂದು ಸಹಸ್ರಾರು ಮಂದಿ ಭಕ್ತರು ಮಹಾರಾಜರ ಅಂತಿಮ ದರ್ಶನವನ್ನು ಪಡೆದರು. ರಾತ್ರಿ ೯.೩೦ ಕ್ಕೆ ಅಂತ್ಯ ಸಂಸ್ಕಾರ ನಡೆಯಿತು. ಜೂನ್ ೩೦ರಂದು ಬೇಲೂರು ಮಠ ಹಾಗೂ ಎಲ್ಲ ಶಾಖಾಕೇಂದ್ರಗಳಲ್ಲಿ ಪೂಜ್ಯರ ಸ್ಮರಣಾರ್ಥ ವಿಶೇಷಪೂಜೆ, ಭಂಡಾರ (ವಿಶೇಷ ಭೋಜನ) ಹಾಗೂ ಶ್ರದ್ಧಾಂಜಲಿ ಕಾರ್ಯಕ್ರಮಗಳು ನಡೆದವು. ಈ ಸಂದರ್ಭದಲ್ಲಿ ಪೂಜ್ಯ ಸ್ವಾಮೀಜಿಯವರ ಸಂಕ್ಷಿಪ್ತ ಜೀವನ ಚರಿತ್ರೆಯನ್ನು (ಆಂಗ್ಲಭಾಷೆಯಲ್ಲಿ) ಹೊರ ತರಲಾಯಿತು.



**೨. ಮೌಲ್ಯ ಶಿಕ್ಷಣ ಕಾರ್ಯಕ್ರಮಗಳು: ದೆಹಲಿ ಆಶ್ರಮವು** ಜೂನ್ ೫ರಿಂದ ೨೯ರ ವರೆಗೆ ೧೬ *ಮೌಲ್ಯಶಿಕ್ಷಣ ವಿಚಾರ ಸಂಕಿರಣ* ಗಳನ್ನು ಏರ್ಪಡಿಸಿತು. ದೆಹಲಿಯೂ ಸೇರಿದಂತೆ ೧೦ ಪ್ರದೇಶಗಳಲ್ಲಿ ನಡೆದ ಈ ಕಾರ್ಯಕ್ರಮಗಳಲ್ಲಿ ೯೫೮ ಮಂದಿ ಪ್ರಾಂಶುಪಾಲರು ಹಾಗೂ ಅಧ್ಯಾಪಕರುಗಳು ಭಾಗವಹಿಸಿದರು. **ಕಾಂಕುರಗಾಛಿ ಆಶ್ರಮವು** ಜೂನ್ ೨೩ರಂದು ಹೂಗ್ಲಿ ಜಿಲ್ಲೆಯ ರಾಮನಗರದಲ್ಲಿ *ಮೌಲ್ಯಶಿಕ್ಷಣ ವಿಚಾರ ಸಂಕಿರಣ* ವನ್ನು ಏರ್ಪಡಿಸಿತು. ಇದರಲ್ಲಿ ೧೭೫ ಮಂದಿ ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

**ಕೊಚ್ಚಿ ಆಶ್ರಮವು** ಜೂನ್ ೮ರಿಂದ ೧೧ರ ವರೆಗೆ *'ವ್ಯಕ್ತಿತ್ವ ವಿಕಸನ ಶಿಬಿರ'* ವನ್ನು ನಡೆಸಿತು. ಇದರಲ್ಲಿ ೩೦ ಮಂದಿ ಯುವಕರು ಭಾಗವಹಿದ್ದರು.

**ಪುರುಲಿಯಾ ವಿದ್ಯಾಪೀಠವು** ಮೇ ೨೯ರಿಂದ ಜೂನ್ ೧ರ ತನಕ ಮೌಲ್ಯ ಶಿಕ್ಷಣವನ್ನು ಕುರಿತ ಆವಾಸಿ ಶಿಬಿರವನ್ನು ಏರ್ಪಡಿಸಿತು. ಇದರಲ್ಲಿ ೮೬ ಮಂದಿ ಬುಡಕಟ್ಟು ಜನಾಂಗದ ವಿದ್ಯಾರ್ಥಿಗಳು ಭಾಗವಹಿಸಿದ್ದರು.

**೩. ಹೊಸ ಕಟ್ಟಡದ ಉದ್ಘಾಟನೆ:** ವೃಂದಾವನ ರಾಮಕೃಷ್ಣ ಮಿಷನ್ ಸೇವಾಶ್ರಮದಲ್ಲಿ ಆಸ್ಪತ್ರೆಯ ಹೊಸ ಕಟ್ಟಡದ ಉದ್ಘಾಟನೆಯು ಜೂನ್ ೭ ರಂದು ನೆರವೇರಿತು. ರಾಮಕೃಷ್ಣ ಮಹಾಸಂಘದ ಪ್ರಧಾನ ಕಾರ್ಯದರ್ಶಿಗಳಾದ ಸ್ವಾಮಿ ಸುವೀರಾನಂದಜಿ ಮಹಾರಾಜ್ ಕಟ್ಟಡವನ್ನು ಉದ್ಘಾಟಿಸಿದರು. ಇದರೊಂದಿಗೆ ೧೦ ಹಾಸಿಗೆಗಳಿರುವ ತುರ್ತು ಚಿಕಿತ್ಸಾ ಘಟಕವನ್ನೂ ಉದ್ಘಾಟಿಸಲಾಯಿತು. ಈ ಕಾರ್ಯಕ್ರಮಗಳಲ್ಲಿ ಅನೇಕ ಮಂದಿ ಗಣ್ಯರು, ಅತಿಥಿಗಳು, ಸಾಧುಗಳು, ಭಕ್ತರು, ವೈದ್ಯರು, ನರ್ಸ್‌ಗಳು, ಹಾಗೂ ಆಸ್ಪತ್ರೆಯ ಸಿಬ್ಬಂದಿಗಳು ಭಾಗವಹಿಸಿದ್ದರು.



Managing Editor : Swami Atmajnananda Editor : Swami Jnanayogananda
Printed and Published by Swami Atmajnananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020